ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸಚಿವರು ಬಹಳ ಕೂಲಂಕುಷವಾಗಿ ಹೇಳಿದ್ದರಿಂದ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ನಿಜ, ಧಾರವಾಡದಲ್ಲಿ ಅರಣ್ಯ ಕಾಲೇಜು ಪ್ರಾರಂಭ ಮಾಡ ಬೇಕೆಂದರು, ನಂತರ ಅರಣ್ಯವನ್ನೂ, ಭೂಮಿಯನ್ನೂ ಕೊಟ್ಟರು. ಮುಂದೆ ಹಣಸೂರಿಗೆ ಕೊಡ ಬೇಕೆಂದು ಆಯಿತು. ಶ್ರೀ ರಾಮೇಗೌಡರು ಇದ್ದಾಗ ಈ ವಿಷಯ ಬಂದಿತ್ತು. ಅಲ್ಲಿ ಸ್ಥಾಪನೆ ಮಾಡುವುದಕ್ಕೆ ಆಗುವುದಿಲ್ಲವೆಂದಾಯಿತು. ಈಗ ಯಾವುದೇ ಕಡೆಯಲ್ಲಿ ಆಗಲಿ, ಒಟ್ಟಿನಲ್ಲಿ ನಮ್ಮ ರಾಜ್ಯದಲ್ಲಿ ಫಾರೆಸ್ಟರ್ಸ್ ಹೆಚ್ಚು ಜನ ಬೇಕಾಗಿರುವುದರಿಂದ, ತರಬೇತಿ ಪಡೆದವರು ಹೆಚ್ಚು ಜನ ಇಲ್ಲದೇ ಇರುವುದರಿಂದ ಈ ಫಾರೆಸ್ಟ್ರಿ ಕಾಲೇಜಿನ ಆವಶ್ಯಕತೆ ಇದೆ. ಮಾನ್ಯ ಸಚಿವರು ಇದರ ಬಗ್ಗೆ ಅಸಕ್ತಿಪಹಿಸಿ ಸ್ವಲ್ಪ ತಡವಾದರೂ ಪರ್ವಾಯಿಲ್ಲ. ಧಾರವಾಡದಲ್ಲಿ ಆದರೂ ಕೊಡಿ, ಅಥವಾ ಶಿವಮೊಗ್ಗದಲ್ಲಿಯಾದರೂ ಕೊಡಿ. ನಮ್ಮ ಭಾಗದಲ್ಲಿ ಬೇಕು ಎಂದು ಪರಸ್ಪರ ಹೊಡೆದಾಡುವುದು ಬೇಡ ಒಟ್ಟಿನಲ್ಲಿ ರಾಜ್ಯಕ್ಕೆ ಒಂದು ಫಾರೆಸ್ಟ್ರಿ ಕಾಲೇಜನ್ನು ಸ್ಥಾಪಿಸುವ ಬಗ್ಗೆ ಸರ್ಕಾರ ಸ್ಪಷ್ಟವಾದ ಭರವಸೆಯನ್ನು ಕೊಡಬೇಕು. ಕೊಡುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಹಿರಿಯ ಸದಸ್ಯರಾದ ಶ್ರೀ ಪಾಟೀಲರ ಸಲಹೆ ಸೂಕ್ತವಾದುದಾಗಿದೆ. ಶ್ರೀ ಜಿ. ವಿ. ಕೆ. ರಾವ್ ವರದಿಯಂತೆ ೬ಳಿ ಲಕ್ಷ ರೂಪಾಯಿಗಳನ್ನು ಭೋದನಾ ಕ್ರಮ ಪ್ರಾರಂಭ ಮಾಡತಕ್ಕಂಥ ಸಂದರ್ಭದಲ್ಲಿ, ಅರಣ್ಯ ಸಂಶೋಧನೆ, ಅಭಿವೃದ್ಧಿಗೆ ಪೂರ್ವಸಿದ್ಧತೆ ಯಾಗುತ್ತಿರುವುದರಿಂದ, ಅರಣ್ಯ ಕಾಲೇಜನ್ನು ಸ್ಥಾಪನೆ ಮಾಡುವ ಬಗ್ಗೆ ಅತ್ಯಂತ ಸಹಾನುಭೂತಿ ಯಿಂದ ಸರ್ಕಾರ ಇದರ ಬಗ್ಗೆ ಶೀಘ್ರವಾಗಿ ಒಂದು ನಿರ್ಣಯ ತೆಗೆದುಕೊಳ್ಳುತ್ತದೆ ಎಂದು ಹೇಳ ಬಯಸುತ್ತೇನೆ.

ತಾಂತ್ರಿಕ ತಜ್ಞರ ಸಮಿತಿಯ ವರದಿ

೨೪೨ (೭೨೧) ಶ್ರೀ ಚಂದ್ರಶೇಖರ ಮಮಾನಿ (ಪರಸಗಡ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ:—

ಅ) ಸವದತ್ತಿಯಲ್ಲಿ ತಾಂತ್ರಿಕ ಶಾಲೆಯನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರದವರು ತಾಂತ್ರಿಕ ತಜ್ಞರ ಸಮಿತಿಯನ್ನು ನೇಮಿಸಿರುವುದು ನಿಜವೆ ?

ಆ) ಹಾಗಿದ್ದಲ್ಲಿ, ಸದರಿ ಸಮಿತಿಯು ಈ ಬಗ್ಗೆ ವರದಿ ಸಲ್ಲಿಸಿದೆಯೇ ?

ಇ) ಹಾಗಿದ್ದಲ್ಲಿ, ಸದರಿ ಶಾಲೆಯನ್ನು ಪ್ರಾರಂಭಿಸಲು ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—

ಅ) ಹೌದು.

ಆ) ಇಲ್ಲ.

ಇ) ವರದಿ ಬಂದ ಕೂಡಲೇ, ಪರಿಶೀಲಿಸಲಾಗುವುದು.

ಶ್ರೀ ಚಂದ್ರಶೇಖರ ಮಮಾನಿ.—ಸವದತ್ತಿಯಲ್ಲಿ ತಾಂತ್ರಿಕ ಶಾಲೆಯನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರದವರು ತಾಂತ್ರಿಕ ತಜ್ಞರ ಸಮಿತಿ ನೇಮಿಸಿದ್ದಾರೆಯೇ ಎಂದು ಕೇಳಿದ್ದಕ್ಕೆ ಹೌದು ಎಂದು ಉತ್ತರ ಕೊಟ್ಟಿದ್ದಾರೆ. ಹಾಗಿದ್ದಲ್ಲಿ ಸಮಿತಿಯು ವರದಿ ಸಲ್ಲಿಸಿದೆಯೇ ಎಂದು ಕೇಳಿದ ಪ್ರಶ್ನೆಗೆ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ನಾನು ಒಂದು ತಿಂಗಳಹಿಂದೆ ಟೆಕ್ನಿಕಲ್ ಡೈರೆಕ್ಟರ್ ಕಚೇರಿಗೆ ಹೋಗಿ ಕೇಳಿದಾಗ ''ವರದಿ ಬಂದಿದೆ, ಸರ್ಕಾರದವರು ದುಡ್ಡು ಕೊಟ್ಟರೆ ಈ ವರ್ಷ ಚಾಲೂ ಮಾಡುತ್ತೇವೆ'' ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇದಕ್ಕೆ ಮಾನ್ಯ ಮಂತ್ರಿಯವರು ಏನು ಉತ್ತರ ಹೇಳುತ್ತಾರೆ ?

ಶ್ರೀ ಎಂ. ರಘುಪತಿ.—ಇದರ ಬಗ್ಗೆ ಟಿ. ಆರ್. ಸೋಮಶೇಖರ್ ಅವರ ಅಧ್ಯಕ್ಷತೆಯಲ್ಲಿ ೨೭-೨-೬೫ ರಲ್ಲಿ ಒಂದು ಸಮಿತಿಯನ್ನು ರಚಿಸಲಾಗಿತ್ತು. ಸುಮಾರು ಐದು ಪತ್ರಗಳನ್ನು ವಿವರಣೆ ಕೋರಿ ಈ ಸಮಿತಿಯವರು ಪತ್ರ ಬರೆದಿದ್ದಾರೆ. ಇದುವರೆಗೂ ಕೇಂದ್ರದಿಂದ ಉತ್ತರ ಬಂದಿಲ್ಲ. ಅದಕ್ಕೋಸ್ಕರ ೧೭ನೇ ತಾರೀಕು ಇದೇ ತಿಂಗಳು ಸಮಿತಿಯವರು ಭೇಟಿ ಕೊಡುತ್ತಿದ್ದಾರೆ.

ಶ್ರೀ ಚಂದ್ರಶೇಖರ ಪಾಟೀಲ್.—ಇಲ್ಲಿಯ ಖಾಸಗಿ ಧಾರ್ಮಿಕ ದತ್ತಿಯವರು ಮುಂದೆ ಬಂದಾಗ ಇದು ಹಿಂದುಳಿದ ಪ್ರದೇಶದ ಇದೆ, ಕಾಲೇಜನ್ನು ಸ್ಥಾಪನೆ ಮಾಡುತ್ತೇವೆ, ಪರವಾನಗಿಯನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಂ. ರಘುಪತಿ.—ಈ ವರ್ಷ ಪಾಲಿಟೆಕ್ನಿಕ್ ಕಾಲೇಜನ್ನು ಸ್ಥಾಪನೆ ಮಾಡುತ್ತಿಲ್ಲ. ಮುಂದಿನ ವರ್ಷ ಪರಿಶೀಲನೆ ಮಾಡುತ್ತೇನೆ.

ಚಿಕ್ಕಮಗಳೂರಿನ ಐ.ಡಿ.ಎಸ್.ಜಿ. ಕಾಲೇಜಿನಲ್ಲಿ ಕೆಲಸ ಮಾಡುತ್ತಿರುವ ಉಪನ್ಯಾಸಕರುಹಾಗೂ ಸಿಬ್ಬಂದಿ ವರ್ಗ

೨೪೩ (೬೦೨) ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಈ ಕೆಳಕಂಡ ಪ್ರಶ್ನೆಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ :—

ಚಿಕ್ಕಮಗಳೂರಿನ ಐಡಿಎಸ್‌ಜಿ ಕಾಲೇಜಿನಲ್ಲಿರುವ ಉಪನ್ಯಾಸಕರ ಹಾಗೂ ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು. ಹಾಗೂ ವಿದ್ಯಾರ್ಥಿಗಳ ಸಂಖ್ಯೆ ಬಲಕ್ಕನುಗುಣವಾಗಿರಬೇಕಾದ ಉಪನ್ಯಾಸಕರ ಹಾಗೂ ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು ?

ಶ್ರೀ ಎಂ ರಘುಪತಿ (ಮಾನ್ಯ ವಿದ್ಯಾಸಚಿವರು).—

೪೭ ಜನ ಉಪನ್ಯಾಸಕರು ೩೫ ಜನ ಸಿಬ್ಬಂದಿ ವರ್ಗದವರು ಇದ್ದಾರೆ. ಸದರಿ ಕಾಲೇಜಿನಲ್ಲಿ ಬೋಧಿಸುತ್ತಿರುವ ವಿವಿಧ ಬೋಧನಾ ವಿಷಯಗಳ ಕಾರ್ಯಭಾರಕ್ಕೆ ಅನುಗುಣವಾಗಿ ಉಪನ್ಯಾಸಕರ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ. ಸಿಬ್ಬಂದಿ ವರ್ಗದ ವಿವಿಧ ಹುದ್ದೆಗಳ ಸಂಖ್ಯೆ ವಿದ್ಯಾರ್ಥಿಗಳಸಂಖ್ಯೆ ಬಲಕ್ಕನುಗುಣವಾಗಿದೆ.

ಶ್ರೀ ಐ. ಬಿ. ಶಂಕರ್.—ಮಾನ್ಯ ವಿದ್ಯಾ ಮಂತ್ರಿಗಳಲ್ಲಿ ನನ್ನದೊಂದು ಸವಿನಯ ಪ್ರಾರ್ಥನೆ. ಎಲ್ಲಿ ಕಡಿಮೆ ಇದೆ ಅದನ್ನು ನಿಮ್ಮ ಗಮನಕ್ಕೆ ತಂದರೆ ಕೂಡಲೇ ಸರಿಪಡಿಸುತ್ತೀರಾ ?

ಶ್ರೀ ಎಂ. ರಘುಪತಿ.—ಅದನ್ನು ಗಮನಕ್ಕೆ ತಂದರೆ ಕೂಡಲೆ ಸರಿಪಡಿಸುತ್ತೇನೆ.

ಶಿಕ್ಷಕರುಗಳ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು

೨೪೪ (೫೩೨) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೇ :—

೧) ರಾಜ್ಯದಲ್ಲಿರುವ ಪ್ರೌಢಶಾಲೆಗಳಲ್ಲಿ ಎಷ್ಟು ಉಪಾಧ್ಯಾಯರ ಹುದ್ದೆಗಳು ಖಾಲಿ ಇವೆ ?

೨) ಈ ಎಲ್ಲಾ ಖಾಲಿ ಹುದ್ದೆಗಳನ್ನು ತುಂಬಲಾಗುವುದೇ ಹಾಗಿದ್ದಲ್ಲಿ ಯಾವಾಗ ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

೧) ರಾಜ್ಯದ ಪ್ರೌಢಶಾಲೆಗಳಲ್ಲಿ ೩೯೫೩ ಶಿಕ್ಷಕರ ಹುದ್ದೆಗಳು ಖಾಲಿ ಇವೆ.

೨) ಆದಷ್ಟು ಬೇಗ ಈ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಶ್ರೀ ಪಂಪಾಪತಿ.—೩೯೫೩ ಹುದ್ದೆಗಳು ಖಾಲಿಯಿದೆ ಎಂದು ತಪ್ಪು ಉತ್ತರವನ್ನು ಕೊಟ್ಟಿದ್ದೀರಿ. ಇದು ಬಹಳ ದೊಡ್ಡ ಸಂಖ್ಯೆ. ಇದರಿಂದಾಗಿ ಎಷ್ಟು ಸಾವಿರ ಜನರಿಗೆ ತೊಂದರೆಯಾಗುತ್ತದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಈ ಹುದ್ದೆಗಳನ್ನು ಸರ್ಕಾರ ಎಷ್ಟು ದಿವಸದಲ್ಲಿ ಭರ್ತಿ ಮಾಡುತ್ತೀರಿ ?

ಶ್ರೀ ಎಂ. ರಘುಪತಿ.—ಇದರ ಬಗ್ಗೆ ನಿನ್ನೆ ತಾನೇ ಪ್ರಕಟನೆ ಮಾಡಿದ್ದೇನೆ. ನಾಲ್ಕು ಭಾಗಗಳಾಗಿ ಮಾಡಿ ನೇಮಕಾತಿ ಸಮಿತಿಗಳನ್ನು ರಚನೆ ಮಾಡಿದ್ದೇವೆ. ಈ ಸಮಿತಿಗಳು ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತಾರೆ. ಈಗ ಹಂಗಾಮಿಯಾಗಿ ಕೆಲಸ ಮಾಡುತ್ತಿದ್ದಾರೆ. ಇದರಿಂದಾಗಿ ಏನೂ